**ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ವಸತಿ ನಿಲಯದ ಕಟ್ಟಡ ಕುರಿತು**

**111 ಶ್ರೀ ಬಿದನೂರು.ಎಸ್ ವಿರೂಪಾಕ್ಷಪ್ಪ (ಗದಗ)**
**ಶ್ರೀ ಡಿ.ಸುಧಾಕರ್(ಸಮಾಜ ಕಲ್ಯಾಣ ಸಚಿವರು)**

ಅ) ಗದಗ ನಗರದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ವಸತಿ ನಿಲಯಗಳ ಕಟ್ಟಡಗಳಿಗೆ ನಿವೇಶನಗಳನ್ನು ಗದಗ ನಗರಾಭಿವೃದ್ಧಿ ಪ್ರಾಧಿಕಾರದಿಂದ ಖರೀದಿಸಿದ್ದು, 2009–10ನೇ ಸಾಲಿನಲ್ಲಿ ಅಲ್ಲಿ ಕಟ್ಟಡವನ್ನು ಕಟ್ಟಲು ಸರ್ಕಾರ ಕ್ರಮ ಕೈಗೊಳ್ಳುವುದೇ; ಹಾಗಿದ್ದಲ್ಲಿ ಯಾವಾಗ ಕಟ್ಟಡ ನಿರ್ಮಾಣದ ಕೆಲಸವನ್ನು ಪ್ರಾರಂಭಿಸಲಾಗುವುದು?

ಗದಗ ನಗರದಲ್ಲಿ ಪರಿಶಿಷ್ಟ ಜಾತಿಗೆ ಸಂಬಂಧಿಸಿದಂತೆ ಗದಗ ನಗರಾಭಿವೃದ್ಧಿ ಪ್ರಾಧಿಕಾರದಿಂದ ಒಂದು ನಿವೇಶನ ಪಡೆದಿದ್ದು, ಕಟ್ಟಡ ನಿರ್ಮಾಣ ಕಾರ್ಯ ಕ್ರಮ ಕೈಗೊಳ್ಳಲಾಗಿದೆ.

ಪರಿಶಿಷ್ಟ ವರ್ಗಕ್ಕೆ ಸಂಬಂಧಿಸಿದಂತೆ ಗದಗ ನಗರದಲ್ಲಿ ಯಾವುದೇ ವಿದ್ಯಾರ್ಥಿನಿಲಯಗಳು ಇಲ್ಲ.

ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದಂತೆ ಮೂರು ವಿದ್ಯಾರ್ಥಿನಿಲಯಗಳಿಗೆ ಗದಗ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿವೇಶನಗಳನ್ನು ಪಡೆಯಲಾಗಿದ್ದು, ಮುಂದಿನ ಆರ್ಥಿಕ ವರ್ಷಗಳಲ್ಲಿ ಆಯವ್ಯಯದ ಲಭ್ಯತೆಯನ್ವಯ ಕಟ್ಟಡ ನಿರ್ಮಾಣ ಕಾರ್ಯವನ್ನು ಪರಿಶೀಲಿಸಲಾಗುವುದು.
ಸಂ:ಸಕಇ 252 ಬಿಎಂಎಸ್ 2009

**ಮೊರಾರ್ಜಿ ವಸತಿ ಶಾಲೆಗೆ ಜಮೀನು ಖರೀದಿಸಿದ್ದು, ಕಟ್ಟಡ ನಿರ್ಮಾಣ ಬಗ್ಗೆ.**

**112 ಶ್ರೀ ಬಿದರೂರು ಎಸ್ ವಿರೂಪಾಕ್ಷ(ಗದಗ)**
**ಪ್ರೊಡಾ. ಮುಮ್ತಾಜ್ ಅಲಿ ಖಾನ್(ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)**

ಅ) ಗದಗ ವಿಧಾನಸಭಾ ಕ್ಷೇತ್ರದಲ್ಲಿ ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ನಿವೇಶನ ಖರೀದಿಸಿರುವುದು ನಿಜವೇ; ಹಾಗಿದ್ದಲ್ಲಿ, ಸದರಿ ನಿವೇಶನದಲ್ಲಿ ಕಟ್ಟಡದ ನಿರ್ಮಾಣ ಕೆಲಸವನ್ನು ಪ್ರಾರಂಭಿಸುವುದು ಯಾವಾಗ?

ಹೌದು

ಶಾಲಾ ಸಂಕೀರ್ಣ ನಿರ್ಮಿಸಲು ಟೆಂಡರ್ ಕರೆಯಲಾಗಿದ್ದು, ಒಬ್ಬ ಟೆಂಡರದಾರರು ಟೆಂಡರ್‌ನಲ್ಲಿ ಭಾಗವಹಿಸಿದ್ದು, ತಾಂತ್ರಿಕ ಅಗತ್ಯತೆಗಳ ಕೊರತೆಯಿಂದ ತಿರಸ್ಕೃತವಾಗಿರುತ್ತದೆ. ದಿನಾಂಕ:1-07-2009ರಂದು ಮರು ಟೆಂಡರ್ ಕರೆಯಲಾಗಿದೆ. ತದನಂತರ, ಅರ್ಹ ಗುತ್ತಿಗೆದಾರರಿಗೆ ಕಾಮಗಾರಿ ಆದೇಶವನ್ನು ನೀಡಲಾಗುವುದು.

**113 ಶ್ರೀ ಬಿದರೂರು. ಎಸ್ ವಿರೂಪಾಕ್ಷಪ್ಪ(ಗದಗ)**
**ರಾಮಚಂದ್ರಗೌಡ(ವೈದ್ಯಕೀಯ ಶಿಕ್ಷಣ ಸಚಿವರು)**

1 ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಮೆಡಿಕಲ್ ಕಾಲೇಜು ಪ್ರಾರಂಭಿಸುವ ಯೋಜನೆಯು ಸರ್ಕಾರದ ಮುಂದಿದೆಯೇ;

ಇಲ್ಲ

2 ಹಾಗಿದ್ದಲ್ಲಿ, ಗದಗ ಜಿಲ್ಲೆ ಈ ಸೌಲಭ್ಯದಿಂದ ವಂಚಿತವಾಗಿರುವುದು ನಿಜವೇ;

ಉದ್ಭವಿಸುವುದಿಲ್ಲ

3 ಹಾಗಿದ್ದಲ್ಲಿ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸಿ ಈ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಿ ಕೊಡುವುದು ಯಾವಾಗ;

ಉದ್ಭವಿಸುವುದಿಲ್ಲ

**114 ಶ್ರೀ ಬಿದರೂರು ಎಸ್ ವಿರೂಪಾಕ್ಷ (ಗದಗ), ಎಂ.ಎಲ್.ಎ**
**ಪ್ರೊ.ಡಾ. ಮುಮ್ತಾಜ್ ಅಲಿ ಖಾನ್(ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)**

ಅ) 2008-09ನೇ ಸಾಲಿನಲ್ಲಿ ವಕ್ಫ್ ಅನುದಾನವನ್ನು ಗದಗ ಜಿಲ್ಲೆಯಲ್ಲಿ ಬಿಡುಗಡೆ ಮಾಡಿರುವ ವಿವರವನ್ನು ಒದಗಿಸುವುದು;

2008-09ನೇ ಸಾಲಿನಲ್ಲಿ ಸಾಕಷ್ಟು ಅನುದಾನ ಲಭ್ಯವಿಲ್ಲದ ಕಾರಣ ಗದಗ ಜಿಲ್ಲೆಯಲ್ಲಿ ವಕ್ಫ್ ಸಂಸ್ಥೆಗಳಿಗೆ ಯಾವುದೇ ಅನುದಾನ ಬಿಡುಗಡೆ ಮಾಡಿರುವುದಿಲ್ಲ. ಹಾಗೂ 2008-09ನೇ ಸಾಲಿನಲ್ಲಿ ರಾಜ್ಯದ 7 ಜಿಲ್ಲೆಗಳಿಗೆ ಅನುದಾನ ಬಿಡುಗಡೆ ಮಾಡಬೇಕಾಗಿದ್ದು, ಇದರಲ್ಲಿ ಗದಗ ಜಿಲ್ಲೆಯೂ ಇರುತ್ತದೆ. ಪ್ರಸಕ್ತ ಸಾಲಿನಲ್ಲಿ ಈ ಜಿಲ್ಲೆಗಳನ್ನು ಆದ್ಯತೆ ಮೇರೆಗೆ ಪರಿಗಣಿಸಿ ವಕ್ಫ್ ಸಂಸ್ಥೆಗಳಿಗೆ ಅನುದಾನ ಬಿಡುಗಡೆಗೊಳಿಸಲಾಗುವುದು.

ಆ) ಶಾದಿಮಹಲ್ ನಿರ್ಮಾಣಕ್ಕಾಗಿ ಕೊಡಲ್ಪಟ್ಟಿರುವ ಅನುದಾನದ ಮೊತ್ತದ ಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆಯೇ? ಹಾಗಿದ್ದಲ್ಲಿ ವಿವರ ಒದಗಿಸುವುದು.

2008-09ನೇ ಸಾಲಿನಲ್ಲಿ ಶಾದಿಮಹಲ್/ಸಮುದಾಯ ಭವನ ನಿರ್ಮಾಣಕ್ಕಾಗಿ ರೂ.1099.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ವಿವರ ಅನುಬಂಧ-1ರಲ್ಲಿ ಲಗತ್ತಿಸಿದೆ.